





ಕಾಂಬೋಡಿಯಾದ ಕುಲೆನ್ ಪರ್ವತದಲ್ಲಿ ಸಹಸ್ ಲಿಂಗು ಹೆಸರಿನ ನದಿಯೊಂದು ಹರಿಯುತ್ತದೆ. ಇದರ ವಿಶೇಷವೇನೆಂದರೆ ಇದು ಹೆಚ್ಚೂಕಡಿಮೆ ನಮ್ಮ ಉತ್ತರ ಕನ್ನಡ ಶಿರಸಿ ಬಳಿಯ ಸಹಸ್ರಲಿಂಗವನ್ನು ಹೋಲುತ್ತದೆ. ಕನ್ನಡ ನಾಡಿನ ಸಹಸ್ರಲಿಂಗದಂತೆಯೇ ಇಲ್ಲಿಯೂ ನದಿಯೊಳಗೆ ಸಾವಿರ ಲಿಂಗಗಳಿವೆ!

ಸಾವಿರಾರು ಕಿಲೊಮೀಟರ್ ದೂರದ ದೇಶದಲ್ಲಿ ಹರಿಯುವ ನದಿಯೊಂದು ನಮ್ಮದೇ ನೆಲದ ಸಂಸ್ಕೃತಿಯನ್ನು ಹೋಲುತ್ತದೆ ಎಂಬುದು ಅಚ್ಚರಿಯ ವಿಚಾರ. ಅವರು ನಮ್ಮಂತೆಯೇ ಯೋಚಿಸಿದ್ದರಾ ಅಥವಾ ನಾವು ಅವರಂತೆ ಯೋಚಿಸಿದ್ದೆವಾ? ಅವರು ನಮ್ಮಲ್ಲಿಗೆ ಬಂದು ನೋಡಿ ಇಲ್ಲಿನ ಮಾದರಿಯನ್ನೇ ಅಲ್ಲೂ ಮಾಡಿದರಾ? ಅಥವಾ ನಮ್ಮವರೇ ಅಲ್ಲಿ ಹೋಗಿ ನೋಡಿ ಬಂದು ಇಲ್ಲಿಯೂ ಅಂಥದೇ ಲಿಂಗಗಳನ್ನು ಕೆತ್ತಿದರಾ ಎಂಬೆಲ್ಲ ಪ್ರಶ್ನೆಗಳು ಅಲ್ಲಿಗೆ ಭೇಟಿ ನೀಡಿದರೆ ಉದ್ಭವಿಸುತ್ತವೆ.

ಸಹಸ್ ಲಿಂಗ್ ನದಿಯ ಪರಿಸರ, ಸುತ್ತಲಿನ ಕಾಡು, ಹವಾಮಾನ, ಮಣ್ಣು, ನೀರೊಳಗೆ ಕೆತ್ತಲಾದ ಲಿಂಗಗಳು, ನದಿಯ ಜುಳು ಜುಳು ಎಲ್ಲವೂ ಶಿರಸಿಯ ಸಹಸ್ರಲಿಂಗ ಪರಿಸರವನ್ನೇ ನೆನಪಿಸುವಂತಿದೆ. ಹೆಸರು ಕೂಡ ಒಂದೇ ರೀತಿಯಿದೆ. ಪರಿಕಲ್ಪನೆ, ಕೆತ್ತಿದ ಜಾಗ, ಲಿಂಗಗಳ ಸಂಖ್ಯೆ ಹೀಗೆ ಎಲ್ಲವೂ ಒಂದಕೊಂದು ಹೋಲಿಕೆಯಿದೆ. ಹೀಗಾಗಿ ಈ ಪ್ರದೇಶ ನಮ್ಮದೇ ಬೇರಿನ ಕವಲು ಎನಿಸುತ್ತದೆ.

ಕಾಂಬೋಡಿಯಾದ ಜನರೇಕೆ ನದಿಯಲ್ಲಿ ಅಷ್ಟೊಂದು ಲಿಂಗಗಳ ಕೆತ್ತಿದರು?

## ಚರಿತ್ರೆಯ ಕೌತುಕ

ಸಿರಸಿ ಬಳಿಯ ಶಾಲ್ಮಲಾ ನದಿಯಲ್ಲಿ ಸಾವಿರಾರು ಲಿಂಗಗಳನ್ನು ಕೆತ್ತಿದ್ದರ ಹಿಂದೆ ಭಕ್ತಿಯ ಹಿನ್ನೆಲೆಯಿರಬಹುದು.  ಆದರೆ ಸಹಸ್ ಲಿಂಗು ನದಿಯಲ್ಲಿ ಲಿಂಗಗಳನ್ನು ಕೆತ್ತಿದ್ದರ ಹಿಂದೆ ಕುತೂಹಲದ ಇತಿಹಾಸವಿದೆ. 7ನೇ ಶತಮಾನ ದಲ್ಲಿ ಭಾರತದಿಂದ ಖ್ಮೇರ್ ವಂಶಸ್ಥರು ಕಾಂಬೋಡಿಯಾಕ್ಕೆ ಹೋಗುತ್ತಾರೆ. ಅವರು ಸುಮಾರು 11ನೇ ಶತಮಾನದ ಹೊತ್ತಿಗೆ ಬಲಿಷ್ಠರಾಗಿ ಅಲ್ಲಿ ಭಾರತದ ದೇವಾಲಯಗಳನ್ನು ಕಟ್ಟುತ್ತಾರೆ. ಅದೇ ಆಂಗಕೋರ್ ವಾಟ್.

ಕಾಂಬೋಡಿಯಾದ ದೇವಾಲಯಗಳನ್ನೆಲ್ಲ ಎತ್ತೆತ್ತರದ ಅಡಿಪಾಯದ ಮೇಲೆ ಕಟ್ಟಲಾಗಿದೆ. ಏಕೆಂದರೆ ಅವೆಲ್ಲ ಭಗವಂತನ ಆವಾಸ ಸ್ಥಾನಗಳು. ಭಗವಂತ ಇರುವುದು ಎತ್ತರದ ಮೇರು ಪರ್ವತದಲ್ಲಿ. ಮೇರು ಪರ್ವತವನ್ನೇರಿ ಶಿವನ ಸಾನಿಧ್ಯ ಹೊಂದುವುದು ಸುಲಭದ ಮಾತಲ್ಲ. ಗರ್ಭಗುಡಿಗೆ ಕಷ್ಟಪಟ್ಟು ಏರಬೇಕು ಎಂಬ ಕಾರಣಕ್ಕೆ ದೇವಾಲಯಗಳನ್ನು ಎತ್ತೆತ್ತರಕ್ಕೆ ಕಟ್ಟಲಾಗಿದೆ. ಆ ಉನ್ನತ ಸ್ಥಳಗಳನ್ನೇ ಹಿಮಾಲಯ ಎಂದೂ ಭಾವಿಸುತ್ತಾರೆ. ಹಿಮಾಲಯವಿದ್ದ ಮೇಲೆ ಗಂಗೆಯೂ ಇರಬೇಕಲ್ಲವೆ? ಅದೇ ಕಾರಣಕ್ಕೆ ಈ ನದಿಗಳಲ್ಲಿ ಲಿಂಗಗಳನ್ನು ಕಟ್ಟಲಾಯಿತು. ಲಿಂಗವನ್ನು ಹಾದು ಬಂದ ನೀರು ಗಂಗೆಯಷ್ಟೇ ಶ್ರೇಷ್ಠ ಎಂದು ಹೇಳುವುದು ಅವರ ಉದ್ದೇಶ ವಾಗಿತ್ತು. ಅಂದರೆ ಒಟ್ಟಿನಲ್ಲಿ ಹಿಂದೂ ಪರಂಪರೆಯನ್ನು  ಪರದೇಶದಲ್ಲಿ ಪ್ರತಿಫಲಿಸುವುದು ಅವರ ಪ್ರಮುಖ ಉದ್ದೇಶವಾಗಿತ್ತು ಎನಿಸುತ್ತದೆ.

## ಕಾಡಿನ ನಡುವೆ ಭಕ್ತಿಯ ಹೊನಲು

ಸಹಸ್ ಲಿಂಗು ನದಿಯಗುಂಟ ಕಾನೊಳಗೆ ನಡೆಯುತ್ತ ಹೋದರೆ ಸುಮಾರು  ಏಳು ಕಿ.ಮೀ.ವರೆಗೂ  ಲಿಂಗಗಳು ಗೋಚರಿಸುತ್ತವೆ. ನದಿಯೊಳಗಿನ ಕಲ್ಲು ಚಪ್ಪಡಿಯೊಳಗೇ ಇಂದ್ರಭವನ, ರಾವಣ ಕೈಲಾಸ ಪರ್ವತವನ್ನೆತ್ತಿದ್ದು, ಶಿವ ಪಾರ್ವತಿ ಇಂಥ ಪುರಾಣದ ಚಿತ್ರಣಗಳನ್ನೂ ಕೆತ್ತಿರುವುದು ಅಚ್ಚರಿಯೆನಿಸುತ್ತದೆ. ನೀರಿನ ಹರಿವು ಕಡಿಮೆಯಿದ್ದಾಗ ಕೆತ್ತನೆ ಕೆಲಸ ಮಾಡಲು ಸಾಧ್ಯ. ಆದರೆ 350 ದಿನವೂ ಬತ್ತದೇ ಹರಿವ ಈ ನದಿಯಲ್ಲಿ ಯಾವಾಗ ಹೇಗೆ ಕೆತ್ತಿದರೋ, ಅದೆಷ್ಟು ಕಲಾವಿದರು ಕೆಲಸ ಮಾಡಿದರೋ, ಎಷ್ಟು ದಿನಗಳು ಹಿಡಿದವೋ, ಏನೆಲ್ಲ ಸವಾಲುಗಳು ಎದುರಾದವೊ? ಒಂದಂತೂ ನಿಜ, ಅವರ ಸಾಹಸದ ಫಲವಾಗಿ 800 ವರ್ಷಗಳ ನಂತರವೂ ಇಲ್ಲಿಗೆ ಭೇಟಿ ಕೊಟ್ಟವರಿಗೆ ಅದೊಂದು ವಿಸ್ಮಯವಾಗಿ ಉಳಿದಿದೆ.

ಕಾಂಬೋಡಿಯಾದಲ್ಲಿನ ಸಹಸ್ ಲಿಂಗು ನದಿಯ ಸಹಸ್ರಲಿಂಗ ದರ್ಶನ ಬೆರಗಿನ ಜೊತೆಗೆ ಹತ್ತಾರು ಉತ್ತರವಿಲ್ಲದ ಪ್ರಶ್ನೆಗಳನ್ನೂ ಉಂಟುಮಾಡುತ್ತದೆ. ನಮ್ಮ ಸಹಸ್ರಲಿಂಗಕ್ಕೂ ಇದಕ್ಕೂ ಇಷ್ಟೊಂದು ಹೋಲಿಕೆಯಿರಲು ಹೇಗೆ ಸಾಧ್ಯ ಎನ್ನಿಸುತ್ತದೆ. ಅಲ್ಲಿನವರು ನಮ್ಮವರು ಎಂದೂ ಭೇಟಿಯೇ ಆಗದಿರಲು ಸಾಧ್ಯವಿದೆ. ಆದರೂ ಒಂದೇ ಕಲಾಕೃತಿ ಹೇಗೆ ಮೂಡಿದ್ದು ಹೇಗೆ?

ನೀರು ಮತ್ತು ಲಿಂಗ ಎರಡೂ ಹಿಂದೂಧರ್ಮದ ಅವಿಭಾಜ್ಯ ಅಂಗ. ಕಾಂಬೋಡಿಯಾಗೆ ಹೋದ ಖ್ಮೇರ್ ವಂಶಸ್ಥರು ಇಲ್ಲಿನವರೇ ಆಗಿದ್ದರಿಂದ ಒಂದೇ ತೆರನಾಗಿ ಯೋಚನೆ ಮಾಡಿರುವ ಸಾಧ್ಯತೆಗಳಿವೆ. ಅದೇನೇ ಇದ್ದರೂ ಇವೆರಡೂ ಒಂದೇ ಕಾಲಘಟ್ಟದಲ್ಲಿ ಆಗಿದ್ದಿರಬಹುದು. ಏಕೆಂದರೆ, ಅಲ್ಲಿನ ವಾಸ್ತುಶಿಲ್ಪಕ್ಕೂ, ಸೋಂದೆ, ಕದಂಬರ ವಾಸ್ತು ಶಿಲ್ಪಕ್ಕೂ ಬಹಳ ಹೋಲಿಕೆಗಳಿವೆ.

## ಕಲ್ಲುಗಳ ಚಿತ್ತಾರ

ಕಾಂಬೋಡಿಯದ ಸಿಯಾಮ್ ರೀಪ್ ನಗರದಿಂದ 72 ಕಿ.ಮೀ. ದೂರ ದಲ್ಲಿದೆ ಕುಲೆನ್ ಮೌಂಟೇನ್. ಪರ್ವತ ಪ್ರದೇಶವಿದು. ಇಲ್ಲಿ ಸುತ್ತೆಲ್ಲ ಕಣ್ಣು ಹಾಯಿಸಿದರೆ ಕಲ್ಲುಗಳ ರಾಶಿಯೇ ಕಾಣಿಸುತ್ತದೆ. ಸಹಸ್ ಲಿಂಗು ನದಿಯಲ್ಲಿ ಪ್ರವಾಹ ಬಂದಾಗ ತೆಪ್ಪಗಳಲ್ಲಿ ಈ ಕಲ್ಲುಗಳನ್ನು ಹಾಕಿ ತೇಲಿ ಬಿಡುತ್ತಿದ್ದರಂತೆ. ಹಾಗೆ ತೇಲಿ ಬಿಟ್ಟ ಕಲ್ಲುಗಳನ್ನು ಬೆಟ್ಟದ ಕೆಳಗಿರುವ ಸಿಯಾಮ್ ರೀಪ್ ಪ್ರದೇಶದಲ್ಲಿ ಸಂಗ್ರಹಿಸಿ ಆಂಗಕೋರ್ ಸಾಮ್ರಾಜ್ಯವನ್ನು ಕಟ್ಟಲಾಗಿದೆ.

ಸಹಸ್ ಲಿಂಗು ನದಿಯೇ ಕೆಳಗೆ ಸಿಯಾಮ್ ರೀಪ್ ನದಿಯಾಗಿ ಹರಿದಿದೆ. ಹೀಗೆ ಸಾವಿರ ವರ್ಷಗಳ ಇತಿಹಾಸವೇ ಈ ನದಿಗೆ ಇದೆ. ಈ ನದಿಯಲ್ಲಿ ಅಂದಿನಿಂದ ಇಂದಿನವರೆಗೂ ಸಾಕಷ್ಟು ನೀರು ಹರಿದಿದೆ. ಆದರೆ ಎಷ್ಟೇ ನೀರು ಹರಿದರೂ ಇಲ್ಲಿನ ಲಿಂಗಗಳು ಮಾತ್ರ ಸವೆಯದೆ ಉಳಿದಿವೆ.